ಅಧ್ಯಕ್ಷರು :– ಈಗ ಏನಾಗುತ್ತಿದೆ ಎಂದರೆ, ಪ್ರತಿ ದಿನ ಒಂದಲ್ಲ ಒಂದು ಕಾರಣಕ್ಕೆ demands ಮೇಲಿನ ಚರ್ಚೆ ಮಾಡದೆ ಮುಂದು ಮುಂದಕ್ಕೆ ಹೋಗುತ್ತಿದೆ. ಅದಕ್ಕಾಗಿ ಇವತ್ತು ಆರಂಭ ಮಾಡಿಬಿಡುವುದು ಒಳ್ಳೆಯದು.

ಶ್ರೀ ಬಸವರಾಜ ರಾಯರೆಡ್ಡಿ :– ಅರ್ಧಗಂಟೆ ಕಾಲಾವಕಾಶಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಅರ್ಧ ಗಂಟೆ ಚರ್ಚೆ ಎಂದರೆ ಇದು ಗಂಟೆಗಟ್ಟಲೆ ಚರ್ಚೆ ಆಗುತ್ತದೆ.

ಶ್ರೀ ಎನ್. ಧರ್ಮಸಿಂಗ್ :– ನಾಳೆ question hour ಆದಮೇಲೆ ನಂತರ demand ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು :– ಆಯಿತು. ಈಗ ಅರ್ಧಗಂಟೆ ಕಾಲಾವಧಿ ಚರ್ಚೆ.

9. ಅರ್ಧಗಂಟೆ ಕಾಲಾವಧಿ ಚರ್ಚೆ :–

ವಿಷಯ :– ಸರ್ಕಾರಿ ಭೂ ಒತ್ತುವರಿಯ ಜಮೀನಿನ ಹರಾಜು ಬಗ್ಗೆ.

ಅಧ್ಯಕ್ಷರು :– ಈಗ ಅರ್ಧಗಂಟೆ ಕಾಲಾವಧಿ ಚರ್ಚೆ. ಬಸವರಾಜ ರಾಯರೆಡ್ಡಿಯವರೆ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಅಧ್ಯಕ್ಷರೆ, 9–07–2007 ರಂದು ನಾನೇನು ಬೆಂಗಳೂರಿನ ಸರ್ಕಾರಿ ಭೂ ಒತ್ತುವರಿಯ ಜಮೀನಿನ ಹರಾಜಿಗೆ ಸಂಬಂಧಿಸಿದಂತೆ ಕೇಳಿದ್ದ ಪ್ರಶ್ನೆಗೆ ಅಂದು ಅನಿವಾರ್ಯ ಕಾರಣದಿಂದ ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡಲು ಆಗಲಿಲ್ಲ. ಆದರೆ ಮರುದಿವಸ ಅಂದರೆ 10 ನೇ ತಾರೀಖು ಉತ್ತರವನ್ನು ಮಾನ್ಯ ಸಚಿವರು ಸದನದಲ್ಲಿ ಮಂಡಿಸಿದ್ದಾರೆ. ಆ ಉತ್ತರವನ್ನು ನೋಡಲಾಗಿ ಅದು ಬಹಳ ಅಸಮರ್ಪಕವಾದ ಉತ್ತರವಾಗಿದೆ. ಬಹಳಷ್ಟು ಗೌಪ್ಯವಾದ ವಿಚಾರಗಳನ್ನು ಅದರಲ್ಲಿ ಬಹಿರಂಗಗೊಳಿಸಿಲ್ಲ. ಗೌಪ್ಯವಾದಂಥ ವ್ಯವಹಾರಗಳು ಅದರಲ್ಲಿದೆ. ಸಾಕಷ್ಟು ಕಾನೂನು ಬಾಹಿರವಾದ ವಿಚಾರಗಳು ಅದರಲ್ಲಿದೆ. ಆದ್ದರಿಂದ ಅದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಬೇಕೆಂದು ವಿರೋಧ ಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್‌ರವರು, ಖರ್ಗೆಯವರು ಇತರೆ ನಾಯಕರುಗಳು ಕೇಳಿದ್ದರಿಂದ ತಾವು ಅದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಏನು ಸರ್ಕಾರಿ ಜಮೀನು ಬಹಳಷ್ಟು ಒತ್ತುವರಿಯಾಗಿದೆ ಇದನ್ನು ಗುರುತಿಸಿ ವಾಪಸ್ ತೆಗೆದುಕೊಳ್ಳುತ್ತಿರುವ ಸರ್ಕಾರದ ಕ್ರಮ ಸರಿಯಾಗಿದೆ. ಅದರ ಬಗ್ಗೆ ನನ್ನ ಮತ್ತು ಬೇರೆಯವರ ಆಕ್ಷೇಪಣೆ ಏನೂ ಇಲ್ಲ. ಆದರೆ, ಅದನ್ನು ತರಾತುರಿಯಾಗಿ ಹರಾಜನ್ನೇನು ಮಾಡುತ್ತಿದ್ದಾರೆ ಇದರಲ್ಲಿ ಕಾನೂನು ಬಾಹಿರವಾದ ಕೆಲಸ ನಡೆದಿದೆ. ಈ ಒತ್ತುವರಿ ಜಮೀನನ್ನೇನು ತರಾತುರಿಯಲ್ಲಿ ಹರಾಜು ಮಾಡಿದ್ದಾರೆ ಇದರಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ, ಕರ್ನಾಟಕ ಭೂ ವಿತರಣಾ ಕಾಯ್ದೆ, ಕರ್ನಾಟಕ ಭೂ ಕಂದಾಯ ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿದ್ದಾರೆ. ಅದರ ಜೊತೆಗೆ ಈಗಾಗಲೇ ತಮಗೆ ಗೊತ್ತಿದೆ, ಸದನದಲ್ಲಿ ತಾವೇ ಖುದ್ದಾಗಿ ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಇದಕ್ಕೆ ಜಂಟಿ ಸದನದ ಸಮಿತಿಯನ್ನು ಮಾಡಿದ್ದೀರಿ. ಆ ಸದನದ ಸಮಿತಿ ಇನ್ನೂ ಕೂಡ ತನ್ನ ಅಂತಿಮ ವರದಿಯನ್ನು ನೀಡಿಲ್ಲ. ಮತ್ತು ಅವರ ಶಿಫಾರಸ್ಸು ಏನು ಎಂದು ಗೊತ್ತಿಲ್ಲ. ಈ ಭೂಮಿಯ ಹರಾಜನ್ನು ಮಾಡಬೇಕೋ ಅಥವಾ ಬೇರೆಯದಕ್ಕೆ ಕಾಯ್ದಿರಿಸಬೇಕೋ, ಏನು ಮಾಡಬೇಕು ಎಂದು ಯಾವುದೇ ಶಿಫಾರಸ್ಸು ಮಾಡಿಲ್ಲ. ಆದರೆ ಇವರು ಸದನ ಸಮಿತಿಯ ಶಿಫಾರಸ್ಸು ಇಲ್ಲದೆ ಹರಾಜು ಮಾಡುತ್ತಿದ್ದಾರಲ್ಲಾ ಇದು ಸದನಕ್ಕೆ ಮಾಡಿದಂಥ ದೊಡ್ಡ ಅವಮಾನ. ಜಂಟಿ ಸದನದ ಸಮಿತಿ ರಚನೆಯಾಗಿದೆ. ಅವರ ಶಿಫಾರಸ್ಸನ್ನು ಕೇಳದೆಯೇ ಹರಾಜು ಮಾಡಿದ್ದಾರಲ್ಲ ಆದ್ದರಿಂದ ಇದನ್ನು ಹೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– Terms of reference ನಲ್ಲಿ ನಮಗೆ ಆ ಶಿಫಾರಸ್ಸು ಇಲ್ಲ. ಇಂಥ ಕಡೆ ಒತ್ತುವರಿಯಾಗಿದೆ ಎಂದು identify ಮಾಡಿ ಸರ್ಕಾರಕ್ಕೆ ವರದಿ ಕೊಡುವುದು ಮಾತ್ರ ಇದೆ. ಆ ಶಿಫಾರಸ್ಸು terms of reference ನಲ್ಲಿ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :– ಸಮಿತಿ ವರದಿಯಾದರೂ submit ಆಗಬೇಕಲ್ಲಾ? ಆ ವಿಚಾರದಲ್ಲಿ ಕೆಲವು ಜನ ಸದಸ್ಯರುಗಳು ಹೇಳಬಹುದಲ್ಲಾ?

ಶ್ರೀ ಸಿದ್ಧರಾಮಯ್ಯ :– ಅಲ್ಲಿ specific ಆಗಿ terms of reference ಇಲ್ಲದಿದ್ದರೂ, The Committee has got powers to make recommendations. ಆ ಜಾಗವನ್ನು ಏನು ಮಾಡಬೇಕು, ಲಂಗ್ ಸ್ಪೇಸ್ ಆಗಿ ಇಡಬೇಕೋ, ಸಾರ್ವಜನಿಕರ ಉಪಯೋಗಕ್ಕಾಗಿ ಇಡಬೇಕೋ, ಬಡವರಿಗೆ

ನಿವೇಶನ ಕೊಡಲು ಇಡಬೇಕೋ, ಸರ್ಕಾರಕ್ಕೆ ಬೇಕಾದ ಶಾಲಾ ಕಾಲೇಜುಗಳಿಗೆ ಇಡಬೇಕೋ ಎಂದು ಹೇಳಬಹುದು. ಬೆಂಗಳೂರು ನಗರಕ್ಕೆ ಪ್ರತಿವರ್ಷ 2 ಲಕ್ಷಕ್ಕೂ ಹೆಚ್ಚು ಜನರು ವಲಸೆ ಬರುತ್ತಿದ್ದಾರೆ. ಈ ರೀತಿ ಇರುವ ಪರಿಸ್ಥಿತಿಯಲ್ಲಿ ಆ ಜಮೀನನ್ನು ಏನು ಮಾಡಬೇಕು ಎಂಬುದನ್ನೂ ಕೂಡ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರಿಗೆ ಶಿಫಾರಸ್ಸು ಮಾಡಬಾರದು, ಅವರಿಗೆ ಅಧಿಕಾರವೇ ಇಲ್ಲ ಎಂಬುದು ಬರುವುದಿಲ್ಲ. ಅವರು ಶಿಫಾರಸ್ಸು ಮಾಡಿಲ್ಲ. ಆ ರೀತಿ ಮಾಡದಿದ್ದರೂ ಈ ರೀತಿ ಹರಾಜು ಮಾಡುತ್ತಿದ್ದಾರೆಂದು ಅವರು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಆ ನಿಯಮದಲ್ಲೇ ಕಮಿಟಿಯ ವಿಶ್ಲೇಷಣೆ ಅಥವಾ ತನಿಖೆ ಆರಂಭವಾಗಿ ಸರ್ಕಾರದ ಗಮನಕ್ಕೆ ಬಂದು ಸರ್ಕಾರ action ಮಾಡುವುದನ್ನು ತಡೆಯಲು ಬರುವುದಿಲ್ಲವೆಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ನಾವೂ ಕಮಿಟಿಯಲ್ಲಿ ಸದಸ್ಯರಾಗಿ ಇದ್ದಿದ್ದರಿಂದ ಇದು ಏನು ಈ ರೀತಿ ಆಗುತ್ತಿದೆ ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ. But the Government is empowered ಎಂದು rules ನಲ್ಲೇ ಮಾಡಿಬಿಟ್ಟಿದ್ದೀರಿ.

ಡಾ॥ ಹೆಚ್.ಸಿ. ಮಹದೇವಪ್ಪ :– Land Reforms Act and Land Grant Rule ಉಲ್ಲಂಘನೆಯಾಗಿದೆಯೆಂದು ರಾಯರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದಲ್ಲಿರುವ ಯಾವುದೇ ಸರ್ಕಾರದ ಜಮೀನು ಅದರ ವಿಲೇವಾರಿ ಮಾಡುವಾಗ ಅದರಲ್ಲಿ 50 ಭಾಗ ಭೂಮಿಯನ್ನು ಎಸ್.ಸಿ/ಎಸ್.ಟಿ ಯ ಜನಾಂಗದವರಿಗೆ ವಿಲೇವಾರಿ ಮಾಡಬೇಕೆಂದು Land Grant Rule ನಲ್ಲಿದೆ, under the Land Reforms Act. ಆದರೆ ಇವರು ಮನಸ್ಸಿಗೆ ಬಂದಂತೆ ಹರಾಜು ಮಾಡಿದರೆ Land Reforms Act and Land Grant Act ಉಲ್ಲಂಘನೆ ಮಾಡಿದಂತೆ ಆಗುತ್ತದೆ. ಯಾರಿಗೆ ಏನು ಬೇಕಾದರೂ ಮಾಡುವಂಥ ಪರಿಸ್ಥಿತಿ ಇಲ್ಲಿರುವುದರಿಂದ Totally the Land Reforms Act and Land Grant Rule are being violated by this Government.

ಶ್ರೀ ಬಸವರಾಜ ರಾಯರೆಡ್ಡಿ :– ಕರ್ನಾಟಕ ಭೂ ಸುಧಾರಣೆ ಕಾಯ್ದೆ, ಕರ್ನಾಟಕ ಭೂ ವಿತರಣಾ ಕಾಯ್ದೆ, ಕರ್ನಾಟಕ ಭೂ ಕಂದಾಯ ಕಾಯ್ದೆ ಎಲ್ಲವೂ ಸ್ಪಷ್ಟವಾಗಿ ಉಲ್ಲಂಘನೆಯಾಗಿದೆ. ಅದರ Section ನ್ನು ಯಾವ್ಯಾವ ಕಡೆ ಇವರು ಉಲ್ಲಂಘನೆ ಮಾಡಿದ್ದಾರೆ ಎಂಬುದನ್ನೂ ನಾನು ಹೇಳುತ್ತೇನೆ. ಏಕೆ ಇಷ್ಟು ತ್ವರಿತವಾಗಿ ಸರ್ಕಾರ ಈ ಭೂಮಿಯನ್ನು ಹರಾಜು ಮಾಡಿದೆ ಎಂಬುದು ನನಗೆ

ಅರ್ಥವಾಗುತ್ತಿಲ್ಲ. ಹೊರಜಗತ್ತಿಗೆ ಈ ಸರ್ಕಾರ ಯಾರ್ಯಾರು ಭೂ ಸ್ವಾಧೀನವನ್ನು ಅಕ್ರಮವಾಗಿ ಮಾಡಿದ್ದಾರೆ ಅವರನ್ನೆಲ್ಲಾ ಬಯಲಿಗೆ ಎಳೆದುಬಿಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಕೆಲವು ವಿರೋಧ ಪಕ್ಷದ ಮುಖಂಡರು ಇದರಲ್ಲಿ ಇದ್ದಾರೆ ಎಂಬ ಮಾತನ್ನು ಹೇಳಿದರು. ಯಾರು ಇದ್ದಾರೆ? ಅದರ ಬಗ್ಗೆ ಇವತ್ತಿನವರೆಗೂ ಸರ್ಕಾರ ಅದನ್ನು ಹೇಳಿಲ್ಲ.

ಅಧ್ಯಕ್ಷರು :- ಕೆಲವರು ಆ ಜಮೀನನ್ನೇ, ಕೆರೆಯನ್ನೇ ಮಾರಿಕೊಂಡು ಬಿಟ್ಟಿದ್ದಾರಲ್ಲ, ಕೆರೆಯನ್ನೇ ಬ್ಯಾಂಕಿಗೆ ಅಡವಿಟ್ಟುಬಿಟ್ಟಿದ್ದಾರಲ್ಲಾ ಅವರೆಲ್ಲಾ ದೊಡ್ಡ ದೊಡ್ಡ ಮನುಷ್ಯರು ತಾನೇ? He need not be a politician.

ಶ್ರೀ ಬಸವರಾಜ ರಾಯರೆಡ್ಡಿ :- ಅವರು ಯಾರು ಎಂದು ಅವರು ಹೇಳಲಿ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಅಧ್ಯಕ್ಷರು :- That is a different thing.

ಶ್ರೀ ಬಸವರಾಜ ರಾಯರೆಡ್ಡಿ :- ಒತ್ತುವರಿ ಮಾಡಿದ್ದನ್ನು ಸರ್ಕಾರ ತೆಗೆದುಕೊಂಡಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದು ಸರಿಯಲ್ಲವೆಂದು ಹೇಳಲಿಲ್ಲ. ಅದು ಸರಿ. ಆದರೆ ಅದನ್ನು ಹರಾಜು ಮಾಡುತ್ತಿರುವ ಕ್ರಮ ಕಾನೂನಿನ ಉಲ್ಲಂಘನೆಯಾಗಿದೆ. ಕಾನೂನು ಬಾಹಿರವಾಗಿದೆ. ಏಕೆ ಕಾನೂನು ಬಾಹಿರವಾಗಿದೆ ಎಂದು ಹೇಳುತ್ತೇನೆ. ಅದರ ಜೊತೆಗೆ ಈ ಹರಾಜಿನಲ್ಲಿ ನನಗೆ ತಿಳಿದಿರುವ ಪ್ರಕಾರ ಸ್ವಜನ ಪಕ್ಷಪಾತವಾಗಿದೆ. ತಮಗೆ ಬೇಕಾದ ಕೆಲವೇ ಕೆಲವರ ಕೂಟವನ್ನು ರಚನೆ ಮಾಡಿಕೊಂಡು ಈ ಹರಾಜಿನಲ್ಲಿ ಭಾಗವಹಿಸಿ ಭೂಮಿಯನ್ನು ಖರೀದಿ ಮಾಡಿದ್ದಾರೆ. ಅದರ ಜೊತೆಗೆ ಈಗಾಗಲೇ ಹೇಳಿದಂತೆ ನಿಯಮಾವಳಿಗಳ ಉಲ್ಲಂಘನೆ ಹಾಗೂ ವ್ಯವಸ್ಥಿತವಾದಂಥ ಭ್ರಷ್ಟಾಚಾರ ಆಗುವಂಥ ಸಂಶಯ ನನಗಿದೆ. ಈ ಭೂಮಿಯನ್ನು ನಾಳೆ ಅವರು conversion ಮಾಡಿಕೊಳ್ಳಬೇಕಾಗುತ್ತದೆ. ಯಾವ builders ಇದನ್ನು ತೆಗೆದುಕೊಂಡಿದ್ದಾರೆ. ಅವರು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ. ಅದಕ್ಕೆ ಅವರು ಉತ್ತರದಲ್ಲಿ ಕರ್ನಾಟಕ ಕಂದಾಯ ಕಾಯ್ದೆ ಸೆಕ್ಷನ್ 177 ಪ್ರಕಾರ ಅನುಕೂಲ ಮಾಡಿಕೊಡಲು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಬಗ್ಗೆ ಅನಂತರ ವಿವರಕ್ಕೆ ಹೋಗುತ್ತೇನೆ. ಅಲ್ಲಿ ಭ್ರಷ್ಟಾಚಾರ ಆಗುವ ಸಾಧ್ಯತೆ ಇದೆ. ಇಲ್ಲಿ ಸ್ಪಷ್ಟವಾಗಿ ಕಾನೂನು ಉಲ್ಲಂಘನೆ, ಕಾನೂನು ಬಾಹಿರ, ಭ್ರಷ್ಟಾಚಾರ ಆಗುವ ಸಾಧ್ಯತೆ ಇರುವುದರಿಂದ ಮುತ್ತು ಸದನಕ್ಕೆ

ಹಕ್ಕುಚ್ಯುತಿಯಾಗುತ್ತಿರುವುದರಿಂದ ಇದರ ಬಗ್ಗೆ ತ್ವರಿತವಾಗಿ ನ್ಯಾಯಾಂಗ ತನಿಖೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

(6 : 00 ಘಂಟೆ)

ಸರ್ಕಾರ ಉತ್ತರದಲ್ಲಿ ಒಟ್ಟು ಎಷ್ಟು ಇದೆ ಎಂದು ಹೇಳಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಎಷ್ಟು ಜನರಿಂದ ಒತ್ತುವರಿ ಮಾಡಿಕೊಂಡಿದಿರಿ ಎಂದು ಕೇಳಿದಾಗ, ಬೆಂಗಳೂರು ನಗರ ಜಿಲ್ಲೆಯಲ್ಲಿ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಬೆಂಗಳೂರು ಪೂರ್ವ, ಅನೇಕಲ್ ತಾಲ್ಲೂಕು, ಈ ಐದು ತಾಲ್ಲೂಕುಗಳಲ್ಲಿ ಒಟ್ಟು 18,447 ಎಕರೆ ಜಮೀನನ್ನು ಒತ್ತುವರಿಯಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಹೊಸಕೋಟೆ, ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ, ರಾಮನಗರ, ಚನ್ನಪಟ್ಟಣ, ಕನಕಪುರ, ಮಾಗಡಿ ಈ ತಾಲ್ಲೂಕುಗಳಲ್ಲಿ ಒಟ್ಟು 4,458 ಎಕರೆ ಜಮೀನು ಎಂದು ಹೇಳಿದ್ದಾರೆ. ಅಂದರೆ, ಒಟ್ಟಾರೆ ಸುಮಾರು 22,905 ಎಕರೆ ಜಮೀನನ್ನು ಸರ್ಕಾರ ಒತ್ತುವರಿಯಾಗಿದೆಂದು ಗುರುತಿಸಿದೆ. ಹೀಗೆ ಗುರುತಿಸಿರುವಂಥ ಜಮೀನನ್ನು ಸರ್ಕಾರ ಎಷ್ಟು ತೆಗೆದುಕೊಂಡಿದೆ? ವಶಕ್ಕೆ ತೆಗೆದುಕೊಳ್ಳಬೇಕಲ್ಲವೇ? ಇದುವರೆಗೆ ತೆಗೆದುಕೊಂಡಿರುವುದು ಕೇವಲ ಸರ್ಕಾರದ ಉತ್ತರ ಪ್ರಕಾರ 11,000 ಎಕರೆ ಮಾತ್ರ. ಅಂದರೆ ಬೆಂಗಳೂರು ಅರ್ಬನ್‌ನಲ್ಲಿ 8,924 ಎಕರೆ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ 2,000 ಎಕರೆ, ಇನ್ನು 11,000 ಎಕರೆ ಜಮೀನು ಅಂದರೆ 50% ಕ್ಕಿಂತ ಹೆಚ್ಚಿನ ಜಮೀನನ್ನು ಸರ್ಕಾರ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಇದಕ್ಕೇನು ಕಾರಣ? ನಿಮಗೇನಾದರೂ ಅದರಲ್ಲಿ ಬಹಳ ಒತ್ತಡಗಳಿದೆಯೇ? ಏಕೆ ತೆಗೆದುಕೊಳ್ಳಲಿಲ್ಲ? ಏಕೆ ತೆಗೆದುಕೊಂಡಿಲ್ಲ ಎಂಬುದನ್ನು ಮಾನ್ಯ ಸಚಿವರು ಹೇಳಲಿ. ಇದಕ್ಕೇನು ಕಾರಣ ಎಂಬುದನ್ನು ನೀವು ಸ್ಪಷ್ಟವಾಗಿ ಬಹಿರಂಗ ಪಡಿಸಬೇಕಾಗುತ್ತದೆ. ಅದರ ಜೊತೆಗೆ ಒತ್ತುವರಿ ಮಾಡಿರುವ ವ್ಯಕ್ತಿಗಳು ಯಾರ್ಯಾರು? ನನ್ನ ಪ್ರಶ್ನೆ ಇನ್ನೂ ಉತ್ತರ ಕೊಟ್ಟಿಲ್ಲ. ಕಳೆದ ಅಧಿವೇಶನದಲ್ಲಿ ನನ್ನದು ಚುಕ್ಕೆ ಗುರುತಿನ ಪ್ರಶ್ನೆಯಾಗಿತ್ತು. It was a starred question. ಯಾರ್ಯಾರು ಒತ್ತುವರಿ ಮಾಡಿದ್ದಾರೆ, ಆ ವ್ಯಕ್ತಿಗಳ ಮತ್ತು ಸಂಸ್ಥೆಗಳ ಹೆಸರುಗಳನ್ನು ಹೇಳಿ ಎಂದು ಕೇಳಿದ್ದೆ. ತಾವು 15 ದಿವಸಗಳ ಕಾಲವಕಾಶ ಕೇಳಿದಿರಿ. ಈಗ 2-3 ತಿಂಗಳು ಕಳೆದರೂ ಕೂಡ ಇವತ್ತಿನವರೆಗೂ ಒತ್ತುವರಿ ಮಾಡಿರುವ ವ್ಯಕ್ತಿಗಳ ಮತ್ತು ಸಂಸ್ಥೆಗಳ ಹೆಸರುಗಳನ್ನು ಸರ್ಕಾರದಿಂದ ನನಗೆ ಉತ್ತರ ಬಂದಿಲ್ಲ. ಸುಮ್ಮನೆ ಯಾರ್ಯಾರೋ ಕೆಲವರು ಮೇಲೆ ರಾಜಕೀಯ ಕಾರಣಕ್ಕಾಗಿ ಅವರ ಮೇಲೆ ಆರೋಪವನ್ನು ಹೊರಿಸಲಿಕ್ಕೆ ಹೊರಟಿದ್ದಾರೆ. ಇದು ಸರಿಯಾದುದಲ್ಲ, ಸ್ಪಷ್ಟವಾಗಿ

ನಾಳೆಯೇ ಅಥವಾ ಇವತ್ತೇ ಯಾರ್ಯಾರು ಜಮೀನು ಒತ್ತುವರಿ ಮಾಡಿದ್ದಾರೆ ಅವರ ಹೆಸರನ್ನು ಮತ್ತು ಸಂಸ್ಥೆಯನ್ನು ಪ್ರಕಟಿಸಿ. ಒತ್ತುವರಿ ಮಾಡಿದಂಥವರ ಮೇಲೆ ಇವತ್ತಿನವರೆಗೆ ನೀವು ಒಂದೂ ಕ್ರಿಮಿನಲ್ ಕೇಸನ್ನು ಹಾಕಿಲ್ಲ. Trespass ಕೇಸ್ ಹಾಕಬೇಕಾಗುತ್ತದೆ. ಇವತ್ತಿನವರೆಗೆ ಹಾಕಿಲ್ಲ, ಏಕೆ ಹಾಕಿಲ್ಲ? ಇದನ್ನು ಸಚಿವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. 1,183 ಎಕರೆ ಜಮೀನು ಹರಾಜು ಹಾಕಿದ್ದಾರೆ. ಇಷ್ಟು ಜಮೀನಿನಲ್ಲಿ ಕೇವಲ 297 ಎಕರೆ ಮಾತ್ರ ನೀವು ಸ್ಥಿರೀಕರಣ ಮಾಡಿದ್ದೀರಿ. ಉಳಿದಿದ್ದನ್ನು ಏಕೆ ಮಾಡಿಲ್ಲ? ಅವರಿಂದ ಹರಾಜಿನಲ್ಲಿ ಹಣ ತೆಗೆದುಕೊಂಡಿದಿರಿ. ಹೀಗಿರುವಾಗ ಅವರಿಗೆ ಏಕೆ ಸ್ಥಿರೀಕರಣ ಮಾಡಲಿಲ್ಲ? ಇದು ಸಂಶಯಕ್ಕೆ ಕಾರಣವಾಗಿದೆ. ಏಕೆಂದರೆ ಭ್ರಷ್ಟಾಚಾರದ ವಾಸನೆ ಇಲ್ಲಿಂದಲೇ ಪ್ರಾರಂಭವಾಗುವುದು. 1,183 ಎಕರೆ ಜಮೀನನ್ನು ಹರಾಜು ಮಾಡಿ ನೀವು ಅವರಿಂದ ದುಡ್ಡು ತುಂಬಿಸಿಕೊಂಡು, ಕೇವಲ 297 ಎಕರೆಗೆ ಮಾತ್ರ ನೀವು ಸ್ಥಿರೀಕರಣ ಮಾಡಿದ್ದೀರಿ. ಉಳಿದಿದ್ದನ್ನು ಏಕೆ ಮಾಡಿಲ್ಲ? ಇದರ ಬಗ್ಗೆ ನೀವು ಸ್ಪಷ್ಟವಾದಂಥ ಉತ್ತರ ಕೊಡಬೇಕಾಗುತ್ತದೆ. ಅಧ್ಯಕ್ಷರೇ ತಾವು ಸ್ಪಷ್ಟವಾಗಿ ಯಾವ್ಯಾವ ಕಾಯಿದೆ ಉಲ್ಲಂಘನೆಯಾಗಿದೆ ಅದನ್ನು ಹೇಳಿ ಎಂದು ಹೇಳಿದಿರಿ, ನಾನು ಈಗ ಅದೇ ವಿಚಾರವನ್ನು ಹೇಳುತ್ತೇನೆ. ಕರ್ನಾಟಕ ಭೂ ಸುಧಾರಣ ಕಾಯಿದೆ, Karnataka Land Revenue Act, ಇದರ ಪ್ರಕಾರ ಏನೇನು ಆಗಿದೆ ಎಂದರೆ, ಇಲ್ಲಿ ಹರಾಜು ಮಾಡಿದಂಥ ಜಮೀನುಗಳು ಯಾವ್ಯಾವು? ಅವರ ಹೆಸರುಗಳನ್ನು ಕೂಡ ಕೇಳಿದ್ದೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ, ಅನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ, ಸಿಂಗೇನ ಅಗ್ರಹಾರ ಗ್ರಾಮ, ಸರ್ವೆ ನಂ. 203, ವಿಸ್ತೀರ್ಣ 16 ಎಕರೆ 22 ಗುಂಟೆ. ತರಹೆ, ತರಹೆ ಎಂದರೆ ಇದು ಯಾವ ಲ್ಯಾಂಡ್ ಗೋಮಾಳ. ಬಿಡ್ಡು ಮೊತ್ತ ಎಕರೆಗೆ 63 ಲಕ್ಷ. ತೆಗೆದುಕೊಂಡಿರುವವರು ಯಾರು, ಉಮ್ರಾವ್ ಡೆವಲಪರ್ಸ್, ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆ, ಬೆಂಗಳೂರು. ಇದು ಒಂದು ನಾನು ಕೋಟ್ ಮಾಡುತ್ತಿದ್ದೇನೆ. ಇಲ್ಲಿ ಬೇಕಾದಷ್ಟು ನಿದರ್ಶನಗಳು ಇದೆ. ಬೆಂಗಳೂರು ಪೂರ್ವ ತಾಲ್ಲೂಕು ಬಿದರಳ್ಳಿ, ಕಾಡುಗೋಡಿ, ಈ ಲ್ಯಾಂಡ್ ಯಾರಿಗೆ ಸೇರಿದ್ದು ಎಂದರೆ, ಇದು ಕೂಡ ಗೋಮಾಳಕ್ಕೆ ಸೇರಿದ್ದು. ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್. ಪುರ, ಸರ್ವೆ ನಂ: 30, 2 ಎಕರೆ 15 ಗುಂಟೆ, ಹುಲ್ಲುಬನ್ನಿ. ಇಲ್ಲಿ ಏನು ಲ್ಯಾಂಡ್ ಕೊಟ್ಟಿದ್ದಾರೆಂದರೆ, ನೂರಕ್ಕೆ ತೊಂಬತ್ತರಷ್ಟು ಲ್ಯಾಂಡ್‌ಗಳು ಗೋಮಾಳಕ್ಕೆ ಸೇರಿದೆ ಮತ್ತು ಅಮೃತ್ ಕಾವಲಿಗೆ ಸೇರಿದೆ. ಖರಾಬ್ ಲ್ಯಾಂಡ್ ಅನ್ನು ಇವರು ಮಾಡುತ್ತಾರೆಂದರೆ ಕಾನೂನು ಇದೆ ಮಾಡಲಿ. According to the Land

Revenue Act, ಗೋಮಾಳ ಲ್ಯಾಂಡ್ ಮತ್ತು ಅಮೃತ್ ಕಾವಲ್ ಅನ್ನು ಇವರಿಗೆ ಹರಾಜು ಮಾಡಲಿಕ್ಕೆ ಅಧಿಕಾರವಿಲ್ಲ. ಗೋಮಾಳ ಲ್ಯಾಂಡ್‌ನ್ನು ಮತ್ತು ಅಮೃತ್ ಕಾವಲ್ ಅನ್ನು, ಈ ಭಾಗದಲ್ಲಿ ಬನ್ನಿಸೊಪ್ಪು ಎಂದು ಹೇಳುತ್ತಾರೆ. ನನಗೆ ಗೊತ್ತಿಲ್ಲ, ಈ ಲ್ಯಾಂಡ್‌ಗಳನ್ನು ಹರಾಜು ಮಾಡಬೇಕಾದರೆ ಮೊದಲು de-notification of the land ಮಾಡಬೇಕು. De-notification ಮಾಡಬೇಕಾದರೆ ಅದಕ್ಕೊಂದು ಕಾಯಿದೆ ಇದೆ. ಗೋಮಾಳ ಲ್ಯಾಂಡ್‌ನ್ನು de-notification ಮಾಡಬೇಕಾದರೆ, ಆ ಊರಿನಲ್ಲಿ ಎಷ್ಟು ಜಾನುವಾರುಗಳ ಸಂಖ್ಯೆ ಇದೆ, ಅದನ್ನು ಇವರು ಗಣತಿ ಮಾಡಬೇಕು. ಇವರು ಗಣತಿ ಮಾಡಿದ್ದಾರೆಯೇ? ಒಂದು ನೂರ ಜಾನುವಾರುಗಳು ಇದ್ದರೆ ಕನಿಷ್ಟ 12 ಎಕರೆ ಜಮೀನನ್ನು ಗೋಮಾಳ ಎಂದು ಕಾಯ್ದಿರಿಸಲೇಬೇಕು. It is a mandatory. ಇವರು ಜಾನುವಾರಗಳ ಸಂಖ್ಯೆಯನ್ನು ಗಣತಿ ಮಾಡದೇ, ಜೊತೆಗೆ ಅವುಗಳಿಗೆ ಹುಲ್ಲುಗಾವಲು ಬೇಕಾಗುತ್ತದೆ, ಗೋಮಾಳ, ಅಮೃತ್ ಕಾವಲ್ ಇವೆಲ್ಲವನ್ನು ಏಕೆ ರಿಜರ್ವ್ ಆಗಿ ಇಟ್ಟಿದ್ದಾರೆ?

(ಈ ಹಂತದಲ್ಲಿ ಶ್ರೀ ಹಂಪನಗೌಡ ಬಾದರ್ಲಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಹೀಗಾಗಿ ನೀವು ಈ ಎಲ್ಲಾ ನಿಯಮವನ್ನು ಉಲ್ಲಂಘಿಸಿ, ಗೋಮಾಳ ಲ್ಯಾಂಡ್ ಮತ್ತು ಅಮೃತ್ ಕಾವಲ್ ಅನ್ನು ಹರಾಜು ಮಾಡಿದ್ದಾರೆ. ಇದು ಸ್ಪಷ್ಟವಾದ ಕಾನೂನಿನ ಉಲ್ಲಂಘನೆಯಾಗಿದೆ. ಮತ್ತು High Court and Supreme Court ನಲ್ಲಿ ಯಾವುದೇ ಗೋಮಾಳ ಲ್ಯಾಂಡ್ ಅನ್ನು ವಿತರಣೆ ಮಾಡಬಾರದೆಂದು ಜಡ್ಜ್‌ಮೆಂಟ್ ಕೂಡ ಆಗಿದೆ. ಆದರೆ ರೆಫರೆನ್ಸ್ ನನ್ನ ಹತ್ತಿರ ಇಲ್ಲ. ನಾಳೆ ಬೇಕಾದರೆ ನಾನು ನಿಮಗೆ ಅದನ್ನು ತೋರಿಸುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳಿಗೆ ಈ ವಿಚಾರ ಗೊತ್ತಿದೆ. ಈ ಗೋಮಾಳ್ ಲ್ಯಾಂಡ್ ಅನ್ನು ಮಾರಲಿಕ್ಕೆ ಬರುವುದಿಲ್ಲ. ಹೀಗಿದ್ದರೂ ನೀವು ಹರಾಜು ಮಾಡಿದ್ದೀರಲ್ಲ ಇದು ಕಾನೂನು ಬಾಹಿರ. Karnataka Land Reforms Act, Section 79 (a), ಯಾರು ಜಮೀನನ್ನು ಖರೀದಿಸಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. Karnataka Land Reforms Act Section 79 (a) ನಲ್ಲಿ ಯಾರು ಜಮೀನು ಖರೀದಿಸಬೇಕು ಯಾರು ಖರೀದಿಸಬಾರದೆಂದು Restriction ಸರ್ಕಾರ ಮಾಡಿದೆ. "Karnataka Land Reforms Act 1961. Section (a)- Acquisition of land by certain persons prohibited. On and from the commencement of the Karnataka Land Reforms (Amendment)Act 1995, no person who or a family

or a joint family with an assured Annual income of not less than Rs. 2 lakh from source other than agriculture land shall be entitled to acquire the land and whether as a land owner land lord, tenant or a mortgage of the possession, otherwise partly in one of the capacity and partly in another." ಸ್ಪಷ್ಟವಾಗಿ ಹೇಳಿದೆ. ಯಾವ ವ್ಯಕ್ತಿಗೆ ಕೃಷಿಯೇತರದಿಂದ ಎರಡು ಲಕ್ಷ ರೂಪಾಯಿ ವರಮಾನ ಇದೆಯೋ ಅವರು ಭೂಮಿಯನ್ನು ಖರೀದಿಸಲಿಕ್ಕೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಇಲ್ಲಿ ಏನಾಗಿದೆ, ಇವರ್‍ಯಾರು ಇಲ್ಲಿ ಇದ್ದಾರೆಂದರೆ, ಕೆ. ಬೂಪನಾಥ್, ಇವರ್‍ಯಾರು? ಉಮ್ರಾ ಡೆವಲಪ್‌ರ್ಸ್, ಬಿ. ವಿಜಯಕುಮಾರ್, ವರುಣ್ ಡೆವಲಪ್‌ರ್ಸ್, ಜಿ.ಅಶೋಕ್ ಕುಮಾರ್ ಡೆವಲೆಪರ್ಸ್, ನಟೇಶ್‌ಕುಮಾರ್ ಅಂಡ್ ಹನುಮಾನ್ ಬಿಲ್ಡ್‌ರ್ಸ್, ವಿ.ಆರ್. ಎಂಟರ್‌ಪ್ರೈಸೆಸ್, ಹಿಲ್ ಲ್ಯಾಂಡ್ ಎಂಟರ್‌ಪ್ರೈಸೆಸ್, ಮಂಜುನಾಥ್ ಡೆವಲೆಪರ್ಸ್, ರಾಜು ಡೆವಲೆಪರ್ಸ್ ಇಲ್ಲಿ ಇನ್ನು ಬಹಳಷ್ಟು ಇದೆ. ಎಲ್ಲರೂ ನೂರಕ್ಕೆ ತೊಂಭತ್ತರಷ್ಟು ಡೆವಲೆಪರ್ಸ್ ಆಗಿದ್ದಾರೆ. ಅಂದರೆ ಇವರು ಡೆವಲೆಪರ್ಸ್ ಆಗಿರುವುದರಿಂದ ಇವರು ಯಾರು agriculturists ಅಲ್ಲ. ಇವರು ಕೃಷಿಕರಲ್ಲ. ಇವರು ರಿಯಲ್ ಎಸ್ಟೇಟ್ ಮಾಡುವಂಥವರು, ನಾಳೆ ಈ ಜಮೀನನ್ನು ಖರೀದಿಸಿ, ಹೆಚ್ಚು ಲಾಭ ಮಾಡಿಕೊಳ್ಳುವಂಥವರು. ಅಂದರೆ ಇದಕ್ಕಾಗಿ ಸೆಕ್ಷನ್ 79 (ಎ) ಸ್ಪಷ್ಟವಾದ ಉಲ್ಲಂಘನೆಯನ್ನು ಸರ್ಕಾರವೇ ಮಾಡಿಸಿದೆ. ಅದಕ್ಕಾಗಿಯೇ ಇದರಲ್ಲಿ ಏನೋ ವ್ಯವಸ್ಥಿತವಾದ ಸಂಚು ಅಡಗಿದೆ ಎಂದು ಹೇಳಿದ್ದು. ಅದರ ಜೊತೆಗೆ Land Grant Act ನ violation ಹೇಗೆ ಆಗಿದೆ ಎಂದರೆ, Sction 10 of the Karnataka Land Grant Rules. Restriction on disposal of land in certain areas :- No land with more than 50 reserved trees in a hectare shall be disposed for cultivation or other purpose except under the orders of the Deputy Commissioner ಎಂದಿದೆ. ಆದರೆ ಇವತ್ತು ಈ ಜಮೀನಿನಲ್ಲಿ ಹರಾಜು ಮಾಡಬೇಕಾದರೆ, ಅಲ್ಲಿ ಗಂಧದ ಮರಗಳಿವೆಯೋ, ತೇಗದ ಮರವಿದೆಯೋ, ತೆಂಗಿನ ಮರವಿದೆಯೋ ಎಂದು ಸರ್ವೆ ಮಾಡಬೇಕು. ನಾಳೆ ದಿವಸ ಅಲ್ಲಿ 50 ತೆಂಗಿನ ಮರಗಳಿದ್ದರೆ? ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಹರಾಜನ್ನು ಯಾವುದರ ಮೇಲೆ ಮಾಡಿದ್ದಿರೆಂದು ಸ್ಪಷ್ಟವಾಗಿ ನಾನು ಕೇಳಿದ್ದೇನೆ, ನನಗೆ ಉತ್ತರವನ್ನು ಕೊಡಲಿಲ್ಲ ನಾನೆ ಡಿ.ಸಿ ಕಚೇರಿಗೆ ಹೋಗಿ ತೆಗೆದುಕೊಂಡು ಬಂದೆ. ಸರ್ಕಾರ ಏನು ಉತ್ತರ

ಕೊಟ್ಟಿದೆ ಎಂದರೆ, ಹರಾಜಿನಲ್ಲಿ ಭಾಗವಹಿಸುವ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಉದ್ದೇಶವೇನೆಂದರೆ, ಹರಾಜು ಪ್ರಕಟಣೆಯಲ್ಲಿ ನಮೂದಿಸಿದಂತೆ ಅದೇ ಉದ್ದೇಶಕ್ಕಾಗಿ ಬಳಸಬೇಕಾಗಿದೆ. ಹರಾಜು ಪ್ರಕಟಣೆಯಲ್ಲಿ ಉದ್ದೇಶವೇನಿದೆ ಎಂದರೆ, ಉದ್ದೇಶವೇನು ಇಲ್ಲ. ಮತ್ತೆ ಲ್ಯಾಂಡ್‌ನಲ್ಲಿ ಏನಿದೆ ಎಂದು ಹೇಳಿಲ್ಲ. ಬರಿ ಇಷ್ಟು ಎಕರೆ ಲ್ಯಾಂಡ್ ಎಂದಿದೆ. ಅಲ್ಲಿ ಎಷ್ಟು ಗಿಡಮರಗಳಿವೆ, ಬಿಲ್ಡಿಂಗ್ ಇದೆಯೋ, ಯಾವುದಾದರೂ ತೆಂಗಿನ ಮರವಿದೆಯೋ, ಯಾವುದಾದರೂ ಶ್ರೀಗಂಧದ ಮರವಿದೆಯೋ ಅದಕ್ಕೆ ವ್ಯಾಲು ಕಟ್ಟುವುದು ಬೇಡವೇ? There is no description. ಇದರಲ್ಲಿ ಏನೂ ವಿವರವೇ ಇಲ್ಲ. ಬೆಂಗಳೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಹರಾಜಿನಲ್ಲಿ ಏನಿದೆ, ನಂ.1 ತಾಲ್ಲೂಕು: ಆನೇಕಲ್, ಹೋಬಳಿ: ಜಿಗಣಿ, ಗ್ರಾಮ : ಗೊಲ್ಲಹಳ್ಳಿ, ಸರ್ವೆ ನಂ. 21, ಅದು ಗ್ರೀನ್ ಬೆಲ್ಟ್, ಹಸಿರುಪಟ್ಟಿ ವಲಯದಲ್ಲಿದೆ, ಹರಾಜಿಗೆ ಇಟ್ಟಿರುವ ವಿಸ್ತೀರ್ಣ: 1.16. ಇದಕ್ಕೆ ಏನು ಹೇಳುತ್ತಾರೆಂದರೆ, ಸಿಡಿಪಿ, ಮತ್ತು ಇತರೆ ಯೋಜನ ಪ್ರಾಧಿಕಾರ ನಕ್ಷೆ ಪ್ರಕಾರ ಭೂ ಉಪಯೋಗವೆಂದು ಹೇಳಲಾಗಿದೆ. ಮತ್ತೆ IMP, Interim Master Plan ಅಂತಿಮ ಗೊಂಡಿರುವುದಿಲ್ಲ ಅದರಿಂದ ಭೂ ಉಪಯೋಗವನ್ನು ನಮೂದಿಸಿಲ್ಲ ಎಂದು ಹೇಳುತ್ತೀರಿ. ಹರಾಜು ಯಾವಾಗ ಆಗಿದೆ ಎಂದರೆ, ದಿನಾಂಕ 26-06-2007 ರಲ್ಲಾಗಿದೆ. ಸಿಡಿಪಿ ಯಾವಾಗ ರಿಲೀಸ್ ಆಗಿದೆ ಎಂದರೆ ದಿನಾಂಕ 25-06-2007 ರಲ್ಲಾಗಿದೆ. ದಿನಾಂಕ 26 ಕ್ಕೆ ಹರಾಜು ಮಾಡುತ್ತಿರಿ, 25 ಕ್ಕೆ ಸಿಡಿಪಿ ರಿಲೀಸ್ ಆಗಿದೆ. ಇದನ್ನು ಹಸಿರುಪಟ್ಟಿಯಿಂದ Yellow ಜೋನ್‌ಗೆ ತೆಗೆದುಕೊಂಡು ಹೋಗುತ್ತಾರೆಂದು ಅವರಿಗೆ ಈಗಾಗಲೇ ಗೊತ್ತಾಗಿದೆ, ಹರಾಜನ್ನು ನಿಲ್ಲಿಸಬಹುದಾಗಿತ್ತಲ್ಲ? This can be stalled. ಈ ಹರಾಜನ್ನು ಏತಕ್ಕೆ ನಿಲ್ಲಿಸಲಿಲ್ಲ? ಇದೊಂದೇ ಅಲ್ಲ ಈ ರೀತಿಯ ಸುಮಾರು ಹರಾಜಿನ 60 ಪ್ರಕರಣಗಳಿದ್ದು Already CDP released. ನೀವು ನೋಟಿಫಿಕೇಷನ್ ತೆಗೆದಾಗ ಸಿಡಿಪಿ ರಿಲೀಸ್ ಆಗಿರಲಿಲ್ಲ, ಆದರೆ ಹರಾಜಿನ ದಿವಸದ ಹಿಂದಿನ ದಿವಸವೇ ಸಿಡಿಪಿ ರಿಲೀಸ್ ಆಗಿತ್ತು. ಅದಕ್ಕೆ ನೀವು ನಿಮ್ಮದೇ ಒಂದು ಗ್ಯಾಂಗ್ ಮಾಡಿಕೊಂಡಿದ್ದಿರಿ, ಈ ಗ್ಯಾಂಗಿನಿಂದ ಜಮೀನನ್ನು ಖರೀದಿ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಿ, ಅದಕ್ಕೆ ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾನು ಸ್ಪಷ್ಟವಾಗಿ ಹೇಳಿದ್ದು.

ಶ್ರೀ ಧರ್ಮಸಿಂಗ್ :- ಯಾರಿಗೆ ಹೇಳುತ್ತಿದ್ದಿರಿ?

ಶ್ರೀ ಬಸವರಾಜ ರಾಯರೆಡ್ಡಿ :- ಕಂದಾಯ ಸಚಿವರಿಗೆ ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ :- ಅವರಿಗೆ ಹೇಳಿದರೆ ಏನು ಉಪಯೋಗ, ಮುಖ್ಯಮಂತ್ರಿಗಳಿದ್ದಾಗ ಹೇಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ :- ನಮ್ಮ ಮಹಾದೇವಪ್ಪನವರು ಹೇಳಿದಂತೆ, Land Grant Act ನಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾರೆ. ಇನ್ನು ಒಂದಂಶವನ್ನು ಹೇಳುತ್ತಾರೆ Section 10, Sub Section 2 : No land within the Municipal limits of city of Bangalore and any village situated within the radius of 16 Kms. from the Bangalore Municipal limit of city of Bangalore ಕೊಡುವುದಕ್ಕೆ ಬರುವುದಿಲ್ಲ, unless the special permission under Section 177 of the Land Revenue Act ಇವರು ಜಾರಿಗೊಳಿಸಬೇಕು. ಅದನ್ನು ಮಾಡಬೇಕಾದರೆ ಮೊದಲೇ ಯಾವ್ಯಾವ ಲ್ಯಾಂಡ್ ಅನ್ನು ನಾವು ಡಿಸ್ಪೋಸ್ ಮಾಡುತ್ತೇವೆಂದು ನೋಟಿಫಿಕೇಷನ್ ಹೊರಡಿಸಬೇಕು, ಅದಿಲ್ಲದೇ ಹರಾಜು ಮಾಡಿದ್ದಾರೆ. ಜೊತೆಗೆ, ಮಹಾದೇವಪ್ಪನವರು ಹೇಳಿದ್ದು ಸರಿ ಇದೆ, ಕರ್ನಾಟಕ ಭೂ ವಿತರಣ ಕಾಯಿದೆ ಪ್ರಕಾರ ವಿತರಣೆಗಾಗಿ ಲಭ್ಯವಿರುವ ಜಮೀನಿನ ಪಟ್ಟಿಯನ್ನು ಯಾವ್ಯಾವ ಜಮೀನನ್ನು ನಾವು ಹರಾಜು ಹಾಕುತ್ತೇವೆ ಅಥವಾ ಡಿಸ್ಪೋಸ್ ಮಾಡುತ್ತೇವೆ ಎಂಬುದಕ್ಕೆ ಮೊದಲು ತಯಾರಿಸಿ, ಸಾಕಷ್ಟು ಪ್ರಕಟಣೆ, ಪ್ರಚಾರವನ್ನು ನೀವು ಸಂಬಂಧಿಸಿದ ತಹಸಿಲ್ದಾರ್ ಕಚೇರಿನಲ್ಲಿ, ಹೋಬಳಿನಲ್ಲಿ, ಊರಿನಲ್ಲಿ ಮಾಡಬೇಕು. ಅದರ ಜೊತೆಗೆ, ಕೃಷಿ ಇಲಾಖೆಯಿಂದ ಸಿ, ಡಿ ತರಗತಿಯ ಜಮೀನುಗಳ್ಯಾವುವು, ಖರಾಬು ಯಾವುದು ಎಂಬುದನ್ನು ಪರಿಗಣನೆ ಮಾಡಬೇಕು. ಅದ್ಯಾವುದು ಕೂಡ ಇಲ್ಲಿ ಆಗಿಲ್ಲ. ಇದಾದ ಮೇಲೆ ಇದನ್ನು ಯಾರ್ಯಾರಿಗೆ ವಿತರಣೆ ಮಾಡಬೇಕೆಂದು ಕರ್ನಾಟಕ ಭೂ ವಿತರಣಾ ಕಾಯಿದೆ, ಸೆಕ್ಷನ್ 5 ನಲ್ಲಿ ಯಾವುದೇ ಗ್ರಾಮದಲ್ಲಿ ವಿತರಣೆಗೆ ಲಭ್ಯವಿರುವ ಜಮೀನನ್ನು ಈ ಕೆಳಗೆ ಸೂಚಿಸಿರುವ ಕಾದುವಿಕೆಗೆ ಅನುಲಕ್ಷಿಸಿ ವಿತರಣೆ ಮಾತಕ್ಕದ್ದು. ಮಾಜಿ ಸೈನಿಕರು, ಮಾಜಿ ರಕ್ಷಣಾ ದಳದವರಿಗೆ 10%, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ : 15%, ರಾಜಕೀಯ ಸಂತ್ರಸ್ಥರು : 10% ಇತರರು 40%, ಇತರರು: 40% ಎಂದರು ಮತ್ತೆ ಅಲ್ಲಿ ಏನು ಹೇಳುತ್ತಾರೆಂದರೆ ಉಪ ನಿಯಮದಲ್ಲಿ ಏನೇ ಇದ್ದರು ಯಾವುದೇ ಗ್ರಾಮದಲ್ಲಿ ವಿತರಣೆಗೆ ಲಭ್ಯವಿರುವ ಜಮೀನು 4 ಹೆಕ್ಟೆರ್‌ಗಿಂತ ಕಡಿಮೆ ಇದ್ದರೆ, ಸಾಧಾರಣವಾಗಿ ಆ ಗ್ರಾಮದಲ್ಲಿ ಇಲ್ಲವೇ ನೆರೆ ಗ್ರಾಮದಲ್ಲಿ ಪರಿಶಿಷ್ಟ ಜಾತಿಗಳ ಇಲ್ಲವೇ ಜನಾಂಗಗಳಿಗೆ ಸೇರಿದ ಜನರಿಗೆ, ಅವರ ಪೈಕಿ ಯಾರು ಅರ್ಜಿ ಹಾಕಿದ್ದಾರೆ ಅಂಥವರಿಗೆ ಜಮೀನು ಕೊಡತಕ್ಕದ್ದು. ಇದಾದ

ಮೇಲೆ Section 6 of the Land Revenue Act. ಮತ್ತೆ ಯಾರ್ಯಾರಿಗೆ ಕೊಡಬೇಕು? ನಿಯಮ 5, ಉಪನಿಯಮ : 1, 4 ನೇ ವರ್ಗದ ಜನರಿಗೆ ಜಮೀನು ವಿತರಣೆ ಮಾಡುವಾಗ ಈ ಕೆಳಗಿನ ಆರ್ಡರ್ ಆಫ್ ಪ್ರೈಯಾರಿಟಿಯನ್ನು ಅನುಸರಿಸಬೇಕು. ಅಂದರೆ, ಆ ಗ್ರಾಮದಲ್ಲಿ ವಾಸಿಸು ಭೂಹೀನ ಜನರು, ಆ ಗ್ರಾಮದಲ್ಲಿ ವಾಸಿಸುವ ಕಡಿಮೆ ಲ್ಯಾಂಡ್ ಹೋಲ್ಡರ್ಸ್, ಅಲ್ಲದೇ ಪಕ್ಕದ ತಾಲ್ಲೂಕಿನಲ್ಲಿ ವಾಸಿಸುವ ಭೂಹೀನ ಜನರು ಸೇರಿರುತ್ತಾರೆ. ಸ್ವಾಮಿ, ನಾನು ಕೇಳುತ್ತೇನೆ, ಈಗ ಕೊಟ್ಟಿರುವವರೆಲ್ಲಾ ಪಕ್ಕದ ತಾಲ್ಲೂಕಿನವರೇ, ಕೆಲವರು ದೆಹಲಿಯವರಿದ್ದಾರೆ. ಬೇರೆ ರಾಜ್ಯದವರಿಗೆ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಿರಿ. ಹೀಗಾಗಿ ಇದರಲ್ಲಿ ಸ್ಪಷ್ಟವಾದ ಉಲ್ಲಂಘನೆಯಾಗಿದೆ. ಅದರ ಜೊತೆಗೆ ಇನ್ನೊಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ, Karnataka Land Grant Act, Section 22, Grant of a land for industrial concern. ಸೆಕ್ಷನ್ 22 ಪ್ರಕಾರ ಕೃಷಿಯೇತರ ಜನರಿಗೆ ಕೊಡುವುದಕ್ಕೆ ನಮಗೆ ಅವಕಾಶವಿದೆ ಎಂದು ಇವರು ನಾಳೆ ದಿವಸ ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಹೇಳಬಹುದು. ಅಲ್ಲಿ ಕೂಡ ಎಷ್ಟು ಜಮೀನನ್ನು ಮಾಡಬಹುದು, Section 22 of the Land Grant Act : ಔದ್ಯಮಿಕ ಸಂಸ್ಥೆಗಳಿಗೆ ಜಮೀನು ವಿತರಣೆ, sub, section 1, Deputy Commissioner ಅವರು ರಾಜ್ಯ ಸರ್ಕಾರದಿಂದ ಮೊದಲೇ ಪಡೆದ ಮಂಜೂರಾತಿಯಿಂದ ಉದ್ಯಮಗಳ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆನ್ವಯ ನೋಂದಾಯಿಸಲ್ಪಟ್ಟ ಔದ್ಯಮಿಕ ಮಂಡಳಿ ಹಾಗೂ ರಾಜ್ಯ ವ್ಯಾಪಾರ ಹಾಗೂ ಉದ್ಯಮ ನಿಯಂತ್ರಣ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟ ಲಘು ಉದ್ಯಮ ಸಂಸ್ಥೆಗಳಿಗೆ ಈ ಕೆಳಗಿನ ಷರತ್ತುಗಳಿಗೆ ಅಧೀನವಾಗಿ ಜಮೀನನ್ನು ವಿತರಣೆ ಮಾಡಬಹುದು.

ಶ್ರೀ ಡಿ.ಟಿ. ಜಯಕುಮಾರ್ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರು ಹರಾಜಿನ ಬಗ್ಗೆ ಮಾತನಾಡುತ್ತಿದ್ದಾರೋ, ಗ್ರಾಂಟ್ ಬಗ್ಗೆ ಮಾತನಾಡುತ್ತಿದ್ದಾರೋ? ನೀವು ಹರಾಜಿನ ಬಗ್ಗೆ ಮಾತನಾಡಿ, ಗ್ರಾಂಟ್ ಬಗ್ಗೆ ಮಾತನಾಡುತ್ತಿದ್ದಿರಿ.

ಶ್ರೀ ಬಸವರಾಜ ರಾಯರೆಡ್ಡಿ :- You are right ಗ್ರಾಂಟು, ಹರಾಜು ಎಂದರೆ ಗೊತ್ತಿಲ್ಲ, ಇಲ್ಲಿ ಏನು ಹೇಳಿದ್ದಾರೆ ನೋಡಿ, ಹರಾಜನ್ನು ಯಾವುದರ ಮೇಲೆ ಮಾಡಿದ್ದಾರೆಂದರೆ, Section 12 (2) of the Land Grant Act ಎಂದು ಇಲ್ಲಿ ಉತ್ತರದಲ್ಲಿ ಹೇಳಿದ್ದಾರೆ, ಆ ಪ್ರಕಾರ ಲ್ಯಾಂಡ್ ಗ್ರಾಂಟ್‌ಗೆ ಬರುತ್ತದೆ. ಇದನ್ನು ನಿಮ್ಮ ಸರ್ಕಾರವೇ ಉತ್ತರದಲ್ಲಿ ಕೊಟ್ಟಿದೆ. Deputy Commissioner

ಅವರು ಸರ್ಕಾರದಿಂದ ಮೊದಲೇ ಪಡೆದ ಮಂಜೂರಾತಿ, ಅಂದರೆ prior to the bid ನೀವು ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಂದು ಕಮಿಟಿ ಇದೆ, ಯಾರು ಅರ್ಜಿದಾರರಿದ್ದಾರೆ ಅವರು ಅದಕ್ಕೆ ಅರ್ಜಿ ಹಾಕಬೇಕು. Deputy Commissioner ಅವರ ಮಟ್ಟದಲ್ಲಿ ಇಷ್ಟು ಎಕರೆಗೆ, ಅದಕ್ಕಿಂತ ಹೆಚ್ಚುವರಿ ಬೇಕಾದರೆ ರಾಜ್ಯ ಮಟ್ಟದಲ್ಲಿ, ಅದಕ್ಕಿಂತ ಹೆಚ್ಚು ಬೇಕಾದರೆ ಸಚಿವಸಂಪುಟಕ್ಕೆ ಹೋಗಬೇಕು. ಕಂದಾಯ ಕಾರ್ಯದರ್ಶಿಯವರ ಮಟ್ಟದಲ್ಲಿ ಎಷ್ಟಿದೆ, ಅದಕ್ಕೆಲ್ಲ ಒಂದು ಲೆವೆಲ್ ಇದೆ ಅದ್ಯಾವುದು ಕೂಡ ಆಗಿಲ್ಲ, ಹರಾಜು ಮಾಡಿದ್ದಾರೆ. ಅದು ಯಾವುದು ಕೂಡ ಆಗಿಲ್ಲ. ಗ್ರಾಂಟ್ ಮಾಡಿಕೊಟ್ಟು ಹರಾಜು ಮಾಡಿದ್ದಾರೆ. ಅಲ್ಲೂ ಏನು ಹೇಳಿದ್ದಾರೆಂದರೆ, Section 22 of the sub-section (3) ಯಾವುದೇ ಲಘು ಉದ್ಯಮ ಸಂಸ್ಥೆಗೆ 2 ಹೆಕ್ಟೇರ್‌ಗಿಂತ ಹೆಚ್ಚು ಜಮೀನನ್ನು ವಿತರಣೆ ಮಾಡತಕ್ಕದ್ದಲ್ಲ. 2 ಹೆಕ್ಟೇರ್ ಅಂದರೆ 5 ಎಕರೆಗಿಂತ ಹೆಚ್ಚು ಮಾಡುವುದಕ್ಕೆ ಬರುವುದಿಲ್ಲ. ಇಲ್ಲಿ ಎಷ್ಟು ಆಗಿದೆ ಸ್ವಾಮಿ, 8-9-10-16 ಎಕರೆಗಳಷ್ಟು ಆಗಿ Land Grant Act violation ಆಗಿದೆ. Land Revenue Act violation ಆಗಿದೆ. Land Reforms Act violation ಆಗಿದೆ. ಅದು ಅಲ್ಲದೇ ನೀವು ಹೇಳಿದ್ದೀರಿ, ಈ ಜಮೀನನ್ನು ಖರೀದಿ ಮಾಡಿದವರಿಗೆ ಅವರು ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆ, ಅದನ್ನು ಏನು ಮಾಡುತ್ತೀರಿ ಎಂದು ಕೇಳಿದರೆ, ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 177 ನಲ್ಲಿ ಸರ್ಕಾರ ಅನುಮತಿಯನ್ನು ಕೊಟ್ಟಿದ್ದು, ಒಡುತ್ತೇವೆನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. ಕಲಂ 177 ಏನು ಹೇಳುತ್ತದೆಂದರೆ, ಸರ್ಕಾರ Deputy Commissioner ರವರಿಗೆ power ಅನ್ನು ಕೊಟ್ಟಿದೆ. ಈ Land ನ್ನು conversion ಮಾಡುವುದಕ್ಕೆ permission ನ್ನು ಕೊಟ್ಟಿದ್ದಾರೆ. ಆದರೆ ಅವರು ಮೊದಲೇ ಅರ್ಜಿಯನ್ನು ಹಾಕಬೇಕಾಗಿತ್ತು. ಜಮೀನನ್ನು ಹರಾಜಿನಲ್ಲಿ ಖರೀದಿಯಿಂದ ಹಿಡಿದು 90 ದಿವಸದೊಳಗಾಗಿ ಅದಕ್ಕೆ ಅರ್ಜಿಯನ್ನು ಹಾಕುತ್ತಾರೆ. ಇದಕ್ಕೆ ಒಂದು penalty ಇದೆ. ಆ penalty ಎಷ್ಟು ಗೊತ್ತೆ, penalty 4 per acre

ಶ್ರೀ ಸಿದ್ಧರಾಮಯ್ಯ :- ನಾಳೆ ಮಾತನಾಡಲು ಇವರಿಗೆ ಅವಕಾಶವನ್ನು ಕೊಡಿ. ಈಗ ಸಮಯವಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ :- ಈಗ ನಾನು ಹೇಳುವುದು incomplete ಆಗುತ್ತದೆ, ನಾನು ಇದನ್ನು ಹೇಳಿ ಮುಗಿಸಿಬಿಡುತ್ತೇನೆ. ತಾವು ನಾಳೆ ಅವಕಾಶವನ್ನು ಕೊಡುವುದಾದರೆ ನಾನು ಈಗ ಮುಗಿಸಿಬಿಡುತ್ತೇನೆ.

ಛೇರ್ಮನ್ :– ಸದನವು ನಾಳೇ ಬೆಳಿಗ್ಗೆ 11 : 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 6 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ನಾಳೆ ಅಂದರೆ ದಿನಾಂಕ 18 ನೇ ಜುಲೈ 2007 ರಂದು ಬೆಳಿಗ್ಗೆ 11 : 00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ – 1

347 (594) ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಬಸ್ ನಿಲ್ದಾಣಗಳ ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳೇನು;

ಆ) 2006–07 ನೇ ಸಾಲಿನಲ್ಲಿ ಬಸ್ ನಿಲ್ದಾಣಗಳಿಗೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)

ಇ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಬಸ್ ನಿಲ್ದಾಣಗಳು ಮಂಜೂರಾಗಿವೆ, ಇದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು? (ಮಂಜೂರಾಗಿದ್ದರೆ ತಾಲ್ಲೂಕಾವಾರು ವಿವರಗಳನ್ನು ತಿಳಿಸುವುದು)

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) KSRTC : ಮೊದಲ ಹಂತದಲ್ಲಿ 28 ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ.

BMTC : ಎಲ್ಲಾ ಬಸ್ ನಿಲ್ದಾಣಗಳ ಅಭಿವೃದ್ಧಿಗಾಗಿ ಸಿಮೆಂಟ್ ಕಾಂಕ್ರೀಟ್ ಡಾಂಬರೀಕರಣ ಶೌಚಾಲಯಗಳ ನವೀಕರಣ, ಇತ್ಯಾದಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಯಶವಂತಪುರ ಮತ್ತು ದೊಮ್ಮಲೂರು ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.

NWKRTC : ಬಸ್ ನಿಲ್ದಾಣಗಳಲ್ಲಿ ನಿರ್ಮಲ್ ಮಾದರಿಯ ಶೌಚಾಲಯಗಳನ್ನು ನಿರ್ಮಿಸಲು ಯೋಜಿಸಲಾಗಿದೆ. 114 ಬಸ್ ನಿಲ್ದಾಣಗಳ ಡಾಂಬರೀಕರಣ ಅಳವಡಿಸಲು ಯೋಜಿಸಲಾಗಿದೆ. 54 ಚಿಕ್ಕ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ.